## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ 1 ನೇ ಎಂ.ಎ.ಸಿ.ಟಿ. ನ್ಯಾಯಾಲಯ, ಕಾರವಾರ

## ಎಂ.ವಿ.ಸಿ. ನಂ. 257/24

ಆರ್.ಡಬ್ಲ್ಯು 1

ಸಾಕ್ಷಿದಾರರ ಹೆಸರು - ರಾಜೇಶ ಶೆಟ್ಟಿ
ತಂದೆಯ ಹೆಸರು - ನಾರಾಯಣ ಶೆಟ್ಟಿ
ವಯಸ್ಸು - 44 ವರ್ಷ
ಉದ್ಯೋಗ - ಅಕೌಂಟ್ ಎಕ್ಸಿಕ್ಯೂಟಿವ್, ಎ.ಜೆ. ಆಸ್ಪತ್ರೆ, ಮಂಗಳೂರು
ವಾಸ್ತವ್ಯ - ಮಂಗಳೂರು

(ಇಂದು ದಿನಾಂಕ 13-03-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - 2 ನೇ ಎದುರುದಾರರ ಪರ ಶ್ರೀ ಎ.ಜಿ.ಹೆಚ್. ವಕೀಲರಿಂದಃ**

ನ್ಯಾಯಾಲಯದಿಂದ ಸಮನ್ಸ್ ಬಂದಿದ್ದರ ಮೇರೆಗೆ ನಾನು ದಾಖಲಾತಿಗಳನ್ನು ಹಾಜರುಪಡಿಸಿ ಸಾಕ್ಷಿ ಹೇಳಲು ಬಂದಿದ್ದೇನೆ. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ ದಿನಾಂಕ 19-01-2024 ರಿಂದ 07-03-2024 ರ ವರೆಗೆ ಒಳರೋಗಿಯಾಗಿ ಚಿಕಿತ್ಸೆ ತೆಗೆದುಕೊಂಡಿದ್ದಾರೆ. ಒಟ್ಟೂ ರೂ. 6,79,189-00 ಬಿಲ್ ಆಗಿತ್ತು. ಅದರಲ್ಲಿ ರೂ. 3,52,955-00 ಗಳನ್ನು ಅರ್ಜಿದಾರರು ಪಾವತಿಸಿದ್ದಾರೆ. ಅದರಲ್ಲಿ ರೂ. 26,234-00 ಗಳನ್ನು ರಿಯಾಯತಿ ಕೊಟ್ಟಿದ್ದೇವೆ. ಇನ್ನುವಿದ ರೂ. 3,00,000-00 ಗಳನ್ನು ವಿಡಾಲ್ ಹೆಲ್ತ್ ಟಿ.ಪಿ.ಎ. ವಿಮಾ ಕಂಪನಿಯವರು ಪಾವತಿಸಿದ್ದಾರೆ. ಆ ಬಗ್ಗೆ ನಾನು ಈ ದಿನ ಬಿಲ್‌ನ್ನು ಹಾಜರಜಪಡಿಸುತ್ತಿದ್ದೇನೆ. ಆಸ್ಪತ್ರೆಯವರು ಕೊಟ್ಟಂತಹ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.1 ಎಂದು, ಬಿಲ್‌ನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್. 2 ಎಂದು, ಅರ್ಜಿದಾರರಿಗೆ ಸಂಬಂಧಪಟ್ಟಂತಹ ಆಸ್ಪತ್ರೆಯ ದಾಖಲಾತಿಗಳನ್ನು ದಿನಾಂಕ 05-12-2025 ರಂದು ಬ್ರಿಜೇಶ್, ಟೆಕ್ನಿಶಿಯನ್, ಎ.ಜೆ. ಆಸ್ಪತ್ರೆಯವರು ಹಾಜರುಪಡಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ಆಸ್ಪತ್ರೆಯ ದಾಖಲಾತಿಯನ್ನು ನಿ.ಆರ್.3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು -ಅರ್ಜಿದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್  ನ್ಯಾಯಾಧೀಶರು
ಹಾಗೂ 1 ನೇ ಎಂ.ಎ.ಸಿ.ಟಿ. ಕಾರವಾರ